# ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ , ಉತ್ತರ ಕನ್ನಡ , ಕಾರವಾರ

## ಸೆಷನ್ಸ್ ಕೇಸ್ ನಂ. 2/2019

ಫಿರ್ಯಾದಿ – ಸರ್ಕಾರ – ಅಂಕೋಲಾ ಪೋಲೀಸ್ ಠಾಣೆ

**ವಿರುದ್ಧ**

ಆರೋಪಿ – ಶಿವರಾಮ ಬೊಬ್ಬು ಪಟಗಾರ ಮತ್ತು ಇತರ 2 ಜನರು

## ದೋಷಾರೋಪಣೆ

ಶ್ರೀಮತಿ ವಿಪುಲ ಎಂ ಬಿ ಪೂಜಾರಿ , ಬಿ.ಎ., ಎಲ್ ಎಲ್ ಬಿ., ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಉತ್ತರ ಕನ್ನಡ , ಕಾರವಾರ ಆದ ನಾನು

1. ಶಿವರಾಮ ತಂದೆಃ ಬೊಬ್ಬು ಪಟಗಾರ,
   ವಯಸ್ಸುಃ 48 ವರ್ಷ, ವೃತ್ತಿಃ ರೈತಾಬಿ
   ಸಾಃ ಬ್ರಹ್ಮೂರು, ಅಂಕೋಲಾ ತಾಲೂಕು
2. ಶ್ರೀಮತಿ ನಾಗವೇಣಿ ಶಿವರಾಮ ಪಟಗಾರ
   ವಯಸ್ಸುಃ 40 ವರ್ಷ, ವೃತ್ತಿಃ ಕೂಲಿ ಕೆಲಸ
   ಸಾಃ ಬ್ರಹ್ಮೂರು, ಅಂಕೋಲಾ ತಾಲೂಕು
3. ವಿನಾಯಕ ತಂದೆಃ ಶಿವರಾಮ ಪಟಗಾರ
   ವಯಸ್ಸುಃ 21 ವರ್ಷ, ವೃತ್ತಿಃ ಕೂಲಿ ಕೆಲಸ
   ಸಾಃ ಬ್ರಹ್ಮೂರು, ಅಂಕೋಲಾ ತಾಲೂಕು

ನಿಮ್ಮ ವಿರುದ್ಧ ಆಪಾದಿಸುವುದೇನೆಂದರೆಃ

ದಿನಾಂಕಃ 12.11.2017 ರಂದು ಬೆಳಿಗ್ಗೆ 11.45 ಗಂಟೆ ಸುಮಾರಿಗೆ ಅಂಕೋಲಾ ಪೋಲೀಸ ಠಾಣೆಯ ವ್ಯಾಪ್ತಿಯಲ್ಲಿ ಬರುವ ಬ್ರಹ್ಮೂರು ಗ್ರಾಮದಲ್ಲಿ ಸರ್ವೆ ನಂಬರ 45/ಬಿ ರಲ್ಲಿಯ 2-20-0 ನೇ ಜಮೀನ ವಿಷಯಕ್ಕೆ ಸಂಬಂಧಿಸಿದಂತೆ ಫಿರ್ಯಾದಿ ಚಾಸಾ.1 ಇವರ ಮೇಲೆ ದ್ವೇಷ ಸಾಧಿಸುತ್ತಾ ಬಂದಿದ್ದ 1 ನೇ ಆರೋಪಿಯಾದ ನೀವು ಫಿರ್ಯಾದಿಯನ್ನು ಕೊಲೆ ಮಾಡುವ ಉದ್ದೇಶದಿಂದ 2 ಮತ್ತು 3 ನೇ ಆರೋಪಿತರೊಂದಿಗೆ ಸಂಗನಮತ ಮಾಡಿಕೊಂಡು , ಅಪರಾಧ

ಮಾಡುವ ಉದ್ದೇಶದಿಂದ ಫಿರ್ಯಾದಿ ಚಾಸಾ.1 ರವರ ಮನೆಯ ಹತ್ತಿರ ಇರುವ ಫಿರ್ಯಾದಿಯ ಬಾಬ್ತು ಜಮೀನಿನಲ್ಲಿ ಅಕ್ರಮವಾಗಿ ಪ್ರವೇಶಿಸಿದಿರಿ ಮತ್ತು ತನ್ಮೂಲಕ ಭಾರತೀಯ ದಂಡ ಸಂಹಿತೆ ಕಲಂ 448 ಜೊತೆ ಕಲಂ 34 ರನ್ವಯ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ .

ಎರಡನೇಯದಾಗಿ ಮೇಲೆ ಹೇಳಿದ ದಿನ , ಸ್ಥಳ ಹಾಗೂ ವೇಳೆಯಂದು 1 ರಿಂದ 3 ನೇ ಆರೋಪಿತರಾದ ನೀವು ಅಪರಾಧ ಮಾಡುವ ಸಮಾನ ಉದ್ದೇಶ ಹೊಂದಿ ಫಿರ್ಯಾದಿದಾರರ ಜಮೀನಿಗೆ ಅಕ್ರಮವಾಗಿ ಪ್ರವೇಶ ಮಾಡಿ ಉಳಿಮೆ ಮಾಡುತ್ತಿದ್ದಾಗ ಚಾಸಾ .1 ಫಿರ್ಯಾದಿ ಅವರು "ಯಾಕೆ ತನ್ನ ಜಮೀನಿನಲ್ಲಿ ಉಳಿಮೆ ಮಾಡುತ್ತೀರಿ " ಎಂದು ಕೇಳಿದ್ದಕ್ಕೆ ಆರೋಪಿತರಾದ ನೀವು ಫಿರ್ಯಾದಿದಾರರಿಗೆ ಸಾರ್ವಜನಿಕ ಸ್ಥಳದಲ್ಲಿ ಅವಮಾನ ಮಾಡುವ ಉದ್ದೇಶದಿಂದ "ಬೇವಾರ್ಸಿ ರಂಡೆ, ಮುದಿ ರಂಡೇ ಬೋಳಿ , ಕುನ್ನಿ" ಎಂದು ಅವಾಚ್ಯ ಶಬ್ದಗಳಿಂದ ಬೈದಿದ್ದು, ತನ್ಮೂಲಕ ಭಾರತೀಯ ದಂಡ ಸಂಹಿತೆ ಕಲಂ 504 ಜೊತೆ ಕಲಂ 34 ರನ್ವಯ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ .

ಮೂರನೇಯದಾಗಿ ಮೇಲೆ ಹೇಳಿದ ದಿನ, ಸ್ಥಳ ಹಾಗೂ ವೇಳೆಯಂದು 1 ರಿಂದ 3 ನೇ ಆರೋಪಿತರಾದ ನೀವು ಅಪರಾಧ ಮಾಡುವ ಸಮಾನ ಉದ್ದೇಶ ಹೊಂದಿ , ಫಿರ್ಯಾದಿದಾರರನ್ನು ಅವಾಚ್ಯವಾಗಿ ಬೈದಿದ್ದಲ್ಲದೇ 1 ನೇ ಆರೋಪಿಯಾದ ನೀನು ಓಡಿ ಹೋಗಿ ಫಿರ್ಯಾದಿ ಚಾಸಾ .1 ಗಾಯತ್ರಿ ಭಟ್ ಇವರಿಗೆ ಅವರ ಮಾನಕ್ಕೆ ಕುಂದುಂಟು ಆಗುವಂತೆ "ನೀನು ಮನೆಯ ಒಳಗೆ ಬಿದ್ದು ಸಾಯಿ" ಎಂದು ಹೇಳಿ ಕೈಯಿಂದ ಮನೆಯ ಒಳಗೆ ದೂಡಿ ಹಾಕಿ ಅಪಮಾನ ಮಾಡಿ ಮಾನಕ್ಕೆ ಕುಂದುಂಟು ಮಾಡಿದ್ದು ತನ್ಮೂಲಕ ಭಾರತೀಯ ದಂಡ ಸಂಹಿತೆ ಕಲಂ 354 ಜೊತೆ ಕಲಂ 34 ರನ್ವಯ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ .

ನಾಲ್ಕನೇಯದಾಗಿ, ಮೇಲೆ ಹೇಳಿದ ದಿನ, ಸ್ಥಳ ಹಾಗೂ ವೇಳೆಯಂದು 1 ರಿಂದ 3 ನೇ ಆರೋಪಿತರಾದ ನೀವು ಅಪರಾಧ ಮಾಡುವ ಸಮಾನ ಉದ್ದೇಶ ಹೊಂದಿ 1 ನೇ ಆರೋಪಿಯಾದ ನೀವು ಫಿರ್ಯಾದಿ ಚಾಸಾ.1 ಅವರಿಗೆ ಕೈಯಿಂದ ಮನೆಯ ಒಳಗೆ ದೂಡಿ ಹಾಕಿ , ಬಾಗಿಲು ಹಾಕಿ ಹೊರಗಿನಿಂದ ಚಿಲಕ ಹಾಕಿ ಮನೆಯ ಒಳಗೆ ಅಕ್ರಮ ಬಂಧನದಲ್ಲಿಟ್ಟು , ತನ್ಮೂಲಕ ಭಾರತೀಯ ದಂಡ ಸಂಹಿತೆ ಕಲಂ 342 ಜೊತೆ ಕಲಂ 34 ರನ್ವಯ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ .

ಐದನೇಯದಾಗಿ, ಮೇಲೆ ಹೇಳಿದ ದಿನ, ಸ್ಥಳ ಹಾಗೂ ವೇಳೆಯಂದು 1 ರಿಂದ 3 ನೇ ಆರೋಪಿತರಾದ ನೀವು ಅಪರಾಧ ಮಾಡುವ ಸಮಾನ ಉದ್ದೇಶ ಹೊಂದಿ ಫಿರ್ಯಾದಿ ಚಾಸಾ .1 ಅವರಿಗೆ ನೀನು ಮನೆಯ ಒಳಗೆ ಬಿದ್ದು ಸಾಯಿ ಎಂದು ಹೇಳಿ ಅವರನ್ನು ಮನೆಯ ಒಳಗೆ ಕೂಡಿ ಹಾಕಿದ್ದಲ್ಲದೇ ಫಿರ್ಯಾದಿದಾರ ಬೊಬ್ಬೆ ಕೇಳಿ ಚಾಸಾ.4 ಮತ್ತು ಚಾಸಾ.5 ರವರು ಫಿರ್ಯಾದಿಯ ಮನೆಯ ಕಡೆಗೆ ಬರುವುದನ್ನು ನೋಡಿ "ಇವತ್ತು ಬಿಟ್ಟಿದ್ದೇನೆ ಮತ್ತೊಂದು ದಿನ ನಿನಗೆ ಉಳಿಸುವುದಿಲ್ಲಾ" ಎಂದು ಜೀವ ಬೆದರಿಕೆ ಹಾಕಿದಿರಿ ಮತ್ತು ತನ್ಮೂಲಕ ಭಾರತೀಯ ದಂಡ ಸಂಹಿತೆ ಕಲಂ 506 ಜೊತೆ ಕಲಂ 34 ರನ್ವಯ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ .

ಆರನೇಯದಾಗಿ, ಫಿರ್ಯಾದಿ ಚಾಸಾ.1 ರವರು ಆರೋಪಿಗಳಾದ ನಿಮ್ಮ ಮೇಲೆ ಮತ್ತು ನಿಮ್ಮ ಮನೆ ಜನರ ಮೇಲೆ ಪೋಲೀಸ ಕಂಪ್ಲೆಂಟ ಮಾಡಿದ್ದರಿಂದ ಫಿರ್ಯಾದಿಯವರ ಮೇಲೆ ಮತ್ತಷ್ಟು ದ್ವೇಷಗೊಂಡ ಆರೋಪಿಗಳಾದ ನೀವು ದಿನಾಂಕಃ 12.11.2017 ರ ರಾತ್ರಿ 23.00 ಗಂಟೆ ಸುಮಾರಿಗೆ ಫಿರ್ಯಾದಿಗೆ ಜೀವಂತ ಸುಟ್ಟು ಕೊಲೆ ಮಾಡುವ ಇರಾದೆಯಿಂದ 3 ಲೀಟರ ಆಗುವಷ್ಟು ಸೀಮೆ ಎಣ್ಣೆ ತುಂಬಿರುವ ಪ್ಲಾಸ್ಟಿಕ್ ಕ್ಯಾನು, ಬೆಂಕಿ ಕಡ್ಡಿಗಳಿರುವ ಬೆಂಕಿ ಪೆಟ್ಟಿಗೆ, ಒಂದು ಬದಿಗೆ ಬಿಳಿ ಬಟ್ಟೆಯಲ್ಲಿ ಸುತ್ತಿರುವ ಹೆಬ್ಬೆರಳು ಗಾತ್ರದ ಕಟ್ಟಿಗೆ ಪಂಜು ತೆಗೆದುಕೊಂಡು ಫಿರ್ಯಾದಿಯ ಮನೆಯ ಹತ್ತಿರ ಹೋಗಿ ಫಿರ್ಯಾದಿ ಚಾಸಾ.1 ರವರು ಮನೆಯಲ್ಲಿ ಇಲ್ಲದಿರುವುದನ್ನು ಕಂಡು ಮತ್ತೊಂದು ದಿವಸ ಬೆಂಕಿ ಹಾಕಿ ಫಿರ್ಯಾದಿಗೆ ಜೀವಂತವಾಗಿ ಸುಟ್ಟು ಸಾಯಿಸಬೇಕೆಂಬ ಇರಾದೆಯಿಂದ ನೀವು ತಂದಿದ್ದ ಸೀಮೆ ಎಣ್ಣೆ ಕ್ಯಾನು , ಬೆಂಕಿ ಪೆಟ್ಟಿಗೆ ಮತ್ತು ಪಂಜ್ ನ್ನು ಫಿರ್ಯಾದಿದಾರರ ಮನೆಯ ಹಿಂದೆ ಬಚ್ಚಿಟ್ಟಿದ್ದು, ತನ್ಮೂಲಕ ಭಾರತೀಯ ದಂಡ ಸಂಹಿತೆ ಕಲಂ 436 , 511 ಜೊತೆ ಕಲಂ 34 ರನ್ವಯ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ .

ಎಂಟನೇಯದಾಗಿ ಮೇಲೆ ಹೇಳಿದ ದಿನ, ಸ್ಥಳ ಹಾಗೂ ವೇಳೆಯಂದು ಆರೋಪಿಯಾದ ನೀನು ಚಾಸಾ.1 ಗಾಯತ್ರಿ ಭಟ್ ಇವರನ್ನು ಕೊಲೆ ಮಾಡುವ ಉದ್ದೇಶದಿಂದಲೇ 3 ಲೀಟರ ಆಗುವಷ್ಟು ಸೀಮೆ ಎಣ್ಣೆ ತುಂಬಿರುವ ಪ್ಲಾಸ್ಟಿಕ್ ಕ್ಯಾನು , ಬೆಂಕಿ ಕಡ್ಡಿಗಳಿರುವ ಬೆಂಕಿ ಪೆಟ್ಟಿಗೆ, ಒಂದು ಬದಿಗೆ ಬಿಳಿ ಬಟ್ಟೆಯಲ್ಲಿ ಸುತ್ತಿರುವ ಹೆಬ್ಬೆರಳು ಗಾತ್ರದ ಕಟ್ಟಿಗೆ ಪಂಜು ತೆಗೆದುಕೊಂಡು ಫಿರ್ಯಾದಿಯ ಮನೆಯ ಹತ್ತಿರ ಹೋಗಿ ಕೊಲೆ ಮಾಡಲು ಪ್ರಯತ್ನಿಸಿ ತನ್ಮೂಲಕ ಭಾರತೀಯ ದಂಡ ಸಂಹಿತೆ ಕಲಂ 307, 511 ಜೊತೆ ಕಲಂ 34 ರನ್ವಯ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ .

ಸದರಿ ಆರೋಪದ ಮೇಲೆ ನೀವು ಈ ನ್ಯಾಯಾಲಯದಿಂದ ಆರೋಪ ವಿಚಾರಣೆಗೆ ಗುರಿಯಾಗತಕ್ಕದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕಃ 03 ನೇ ಫೆಬ್ರುವರಿ 2020.

(ವಿಪುಲ ಎಂ.ಬಿ.ಪೂಜಾರಿ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ .

**ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ , ಉತ್ತರ ಕನ್ನಡ , ಕಾರವಾರ**

**ಸೆಷನ್ಸ್ ಕೇಸ್ ನಂ. 2/2019**

ಫಿರ್ಯಾದಿ – ಸರ್ಕಾರ – ಅಂಕೋಲಾ ಪೋಲೀಸ್ ಠಾಣೆ

**ವಿರುದ್ಧ**

ಆರೋಪಿ – ಶಿವರಾಮ ತಂದೆಃ ಬೊಬ್ಬು ಪಟಗಾರ ಮತ್ತು ಇತರರು

**ದೋಷಾರೋಪಣೆ**

ಆರೋಪಿಯ ಹೆಸರು – ಶಿವರಾಮ

ತಂದೆಯ ಹೆಸರು – ಬೊಬ್ಬು ಪಟಗಾರ

ವಯಸ್ಸು – ವರ್ಷ

ಉದ್ಯೋಗ – ರೈತಾಬಿ

ವಾಸ – ಬ್ರಹ್ಮೂರು, ಅಂಕೋಲಾ ತಾಲೂಕು.

**ಆರೋಪಿಯ ಹೇಳಿಕೆ**

ಪ್ರಶ್ನೆಃ ನಿಮ್ಮ ಮೇಲೆ ಮಾಡಿದ ದೋಷಾರೋಪಣೆಯ ವಿವರಗಳು ನಿಮಗೆ ತಿಳಿಯಿತೆ?
ಉತ್ತರಃ

ಪ್ರಶ್ನೆಃ ನೀವು ತಪ್ಪು ಒಪ್ಪಿಕೊಳ್ಳುತ್ತಿರೋ ಅಥವಾ ವಿಚಾರಣೆ ಆಗಬೇಕೆಂದು ಬಯಸುತ್ತಿರಾ?
ಉತ್ತರಃ

ಮೇಲೆ ಹೇಳಿದ ದೋಷಾರೋಪಣೆಗಳನ್ನು ಆರೋಪಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಬರೆದುಕೊಳ್ಳಲಾಯಿತು..

ದಿನಾಂಕಃ 03 ನೇ ಫೆಬ್ರುವರಿ 2019

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ .

**ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ , ಉತ್ತರ ಕನ್ನಡ , ಕಾರವಾರ**

**ಸೆಷನ್ಸ್ ಕೇಸ್ ನಂ. 2/2019**

ಫಿರ್ಯಾದಿ – ಸರ್ಕಾರ – ಅಂಕೋಲಾ ಪೋಲೀಸ್ ಠಾಣೆ

**ವಿರುದ್ಧ**

ಆರೋಪಿ – ಶಿವರಾಮ ತಂದೆಃ ಬೊಬ್ಬು ಪಟಗಾರ ಮತ್ತು ಇತರರು

**ದೋಷಾರೋಪಣೆ**

ಆರೋಪಿಯ ಹೆಸರು – ಶ್ರೀಮತಿ ನಾಗವೇಣಿ

ಗಂಡನ ಹೆಸರು – ಶಿವರಾಮ ಪಟಗಾರ

ವಯಸ್ಸು – ವರ್ಷ

ಉದ್ಯೋಗ – ಮನೆ ಕೆಲಸ

ವಾಸ – ಬ್ರಹ್ಮೂರು, ಅಂಕೋಲಾ ತಾಲೂಕು.

**ಆರೋಪಿಯ ಹೇಳಿಕೆ**

ಪ್ರಶ್ನೆಃ ನಿಮ್ಮ ಮೇಲೆ ಮಾಡಿದ ದೋಷಾರೋಪಣೆಯ ವಿವರಗಳು ನಿಮಗೆ ತಿಳಿಯಿತೆ?
ಉತ್ತರಃ

ಪ್ರಶ್ನೆಃ ನೀವು ತಪ್ಪು ಒಪ್ಪಿಕೊಳ್ಳುತ್ತಿರೋ ಅಥವಾ ವಿಚಾರಣೆ ಆಗಬೇಕೆಂದು ಬಯಸುತ್ತಿರಾ?
ಉತ್ತರಃ

ಮೇಲೆ ಹೇಳಿದ ದೋಷಾರೋಪಣೆಗಳನ್ನು ಆರೋಪಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಬರೆದುಕೊಳ್ಳಲಾಯಿತು..

ದಿನಾಂಕಃ 03 ನೇ ಫೆಬ್ರುವರಿ 2019

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ .

**ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ , ಉತ್ತರ ಕನ್ನಡ , ಕಾರವಾರ**

**ಸೆಷನ್ಸ್ ಕೇಸ್ ನಂ. 2/2019**

ಫಿರ್ಯಾದಿ – ಸರ್ಕಾರ – ಅಂಕೋಲಾ ಪೋಲೀಸ್ ಠಾಣೆ

**ವಿರುದ್ಧ**

ಆರೋಪಿ – ಶಿವರಾಮ ತಂದೆಃ ಬೊಬ್ಬು ಪಟಗಾರ ಮತ್ತು ಇತರರು

**ದೋಷಾರೋಪಣೆ**

ಆರೋಪಿಯ ಹೆಸರು – ವಿನಾಯಕ

ತಂದೆ/ಗಂಡನ ಹೆಸರು – ಶಿವರಾಮ ಪಟಗಾರ

ವಯಸ್ಸು – ವರ್ಷ

ಉದ್ಯೋಗ – ರೈತಾಬಿ

ವಾಸ – ಬ್ರಹ್ಮೂರು, ಅಂಕೋಲಾ ತಾಲೂಕು.

**ಆರೋಪಿಯ ಹೇಳಿಕೆ**

ಪ್ರಶ್ನೆಃ ನಿಮ್ಮ ಮೇಲೆ ಮಾಡಿದ ದೋಷಾರೋಪಣೆಯ ವಿವರಗಳು ನಿಮಗೆ ತಿಳಿಯಿತೆ?
ಉತ್ತರಃ

ಪ್ರಶ್ನೆಃ ನೀವು ತಪ್ಪು ಒಪ್ಪಿಕೊಳ್ಳುತ್ತಿರೋ ಅಥವಾ ವಿಚಾರಣೆ ಆಗಬೇಕೆಂದು ಬಯಸುತ್ತಿರಾ?
ಉತ್ತರಃ

ಮೇಲೆ ಹೇಳಿದ ದೋಷಾರೋಪಣೆಗಳನ್ನು ಆರೋಪಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಬರೆದುಕೊಳ್ಳಲಾಯಿತು..

ದಿನಾಂಕಃ 03 ನೇ ಫೆಬ್ರುವರಿ 2020

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ .